

## ರೇಡಿಯೊ ಡಾಕ್ಟ್ರು!

ನಮ್ಮ ಮನೆಯ ಅಡುಗೆಕೋಣೆಯ ಸಂಗಾತಿ ಫಿಲಿಪ್ಸ್ ರೇಡಿಯೊಗೆ ಈಗ 25ರ ಹರೆಯ. ನಾವು ಆಗಾಗ ಅದೇ ರೇಡಿಯೊದಲ್ಲಿ ಹಾಡುಗಳನ್ನು ಆಲಿಸುವುದೂ ಇದೆ. ಈ ರೇಡಿಯೊ ಕೆಲ ದಿನಗಳಿಂದ ಕೊರ ಕೊರ ಅನ್ನುತ್ತಿತ್ತು. ಅದನ್ನು ದುರಸ್ತಿ ಮಾಡುವವರು ಸಿಗದೆ ಮೌನವಾಗಿತ್ತು. ಅಂದು ನನ್ನ ಪರಿಚಯದ ವೈದ್ಯರು ಬಹಳ ವರ್ಷಗಳ ನಂತರ ಮನೆಗೆ ಬಂದಿದ್ದರು. ನನ್ನ ಪುಟ್ಟ ಮಗಳು ಹಾಗೂ ಪತ್ನಿಗೆ ರೇಡಿಯಾಲಜಿ ಸ್ಪೆಷಲಿಸ್ಟ್ ಆದ ಅವರನ್ನು ಪರಿಚಯಿಸಿದೆ. ಪತ್ನಿ ಕಾಫಿ ತರಲು ಅಡುಗೆ ಕೋಣೆಯತ್ತ ಸಾಗಿದಳು. ಮಗಳು ಓಡಿ ಹೋಗಿ ಹಾಳಾದ ರೇಡಿಯೊ ತಂದು, 'ಇದು ಕೊರ ಕೊರ ಅನ್ನುತ್ತಿದೆ. ರಿಪೇರಿಗೆ ಯಾರೂ ಸಿಕ್ಕಿರಲಿಲ್ಲ. ಹೇಗೂ ನೀವು ರೇಡಿಯಾಲಜಿ ಸ್ಪೆಷಲಿಸ್ಟ್ ಅಲ್ಲವೆ, ಸ್ವಲ್ಪ ನೋಡಿ ಪ್ಲೀಸ್' ಎಂದು ವೈದ್ಯರ ಬಳಿ ಕೊಟ್ಟಳು!

**ನಗರ ಗುರುದೇವ್ ಭಂಡಾರ್ಕರ್**

## ತಲೆಗೆ ಬಣ್ಣ ಹಚ್ಚಿಕೊಳ್ಳುತ್ತಾಳೆ...

ಅದೊಂದು ದಿನ ನನ್ನ ನಾದಿನಿ ಬೇಸರದಿಂದ ತನಗೆ ಸಕ್ಕರೆ ಕಾಯಿಲೆ ಬಂದಿದ್ದಾಗಿ ಹೇಳುತ್ತಿದ್ದಳು. ಹಿಂದಿನ ದಿನವಷ್ಟೆ ವೈದ್ಯರ ಬಳಿ ಯಾವುದೊ ಪರೀಕ್ಷೆಗೆ ಹೋಗಿದ್ದಾಗ ಸಕ್ಕರೆ ಪ್ರಮಾಣ ಹೆಚ್ಚಿಗೆ ಇರುವುದು ಗೊತ್ತಾಗಿ, ತಲೆಯಮೇಲೆ ಕೈ ಹೊತ್ತು ಕುಳಿತಿದ್ದಳು. ನಾವು ಅವಳಿಗೆ ಸಮಾಧಾನ ಮಾಡಿ, 'ಚಿಂತಿಸಬೇಡ ಮಾರಾಯ್ತಿ, ಊಟೋಪಚಾರದಲ್ಲಿಯೇ ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸಬಹುದು. ನೀನು ಏನೇನೊ ತಲೆಗೆ ಹಚ್ಚಿಕೊಂಡು ಕೂಡಬೇಡ. ಅದರಿಂದ ನಿನ್ನ ಸಮಸ್ಯೆ ಜಾಸ್ತಿ ಆಗುತ್ತೆ' ಎಂದು ಹೇಳಿದೆವು. ಅಲ್ಲಿಯೇ ಕುಳಿತಿದ್ದ ನಾದಿನಿಯ ಮಗಳು, 'ಹೌದು ದೊಡ್ಡಪ್ಪ, ಸುಮ್ನೆ ತಲೆಗೆ ಬಣ್ಣ ಎಲ್ಲಾ ಹಚ್ಕೋತಾಳೆ...' ಎಂದು ಮುಗ್ಧವಾಗಿ ಹೇಳಿದಾಗ ಬಿಗುವಿನ ವಾತಾವರಣ ತಿಳಿಯಾಗಿ ನಗು ತುಂಬಿಕೊಂಡಿತು.



**ಶಿವಮೊಗ್ಗ ರಮೇಶ್**